# JOHNNY BIOSPHERE
## IN
## BANGALORE, MYSORE & MANGALORE TO CREATE AWARENESS ON *"YOUR ECOSYSTEM"*



*If there were no fresh air or no clean water; if the temperature were too hot or too cold - we could not live. Our environment is truly for life .Your ecosystem is you and your environment, both go hand-in-hand. The Biosphere is our home....*
*It belongs to you; if you don't look after - who will ?*

**Programme Sponsored by :**

- Dept. of Ecology, Environment & Forest, Govt. of Karnataka
- Bangalore Urban Environment Project
- Environment Canada
  Fisheries & Oceans Canada
- Lakeside Education Trust
  Bangalore-560 042

**Co-ordinated by :**

- Environment Cell, **TECSOK**
  Bangalore-560 002

**Dr. J.R. Vallentyne** popularly known as Johnny Biosphere, Canadian Planetary Ecologist, will be in BANGALORE, MYSORE & MANGALORE during December 4th to 15th, 1993. Dr. Vallentyne, President of the International Association of Limnology from 1974 to 1980, is presently Research Scientist Emeritus at the Canada Centre for Inland Waters in Burlington. Ontario. His alter ego, **Johnny Biosphere**, environmental educator, has been carrying a globe on his back since 1980 - as a reminder that we live on Earth.

Dr. J.R. Vallentyne will be available for both public and technical talks for creating awareness amongst the public on environmental activities.

Johnny Biosphere will also be available to schools (elementary, middle, high) for one hour ''Know Your Ecosystem'' presentations, followed by interactive question and answer sessions with students.

Dr. Vallentyne was the orginator of the eco-system approach to environment management, now accepted in major part of the Globe. He was the recipient of the 1992 Rachel Carson Award for increasing public awareness of the environment to an extent that has changed human practices.

If local environmental activities can be enhanced by his presence he will go out of his way to do so.

**Dr. C. Rajashekara Murthy**, an eminent Environmental Scientist, Canada, a Native of Bangalore, will accompany ''Johnny Biosphere'' during this programme.

## PROGRAMME in BRIEF

| | |
|---|---|
| Dec. 4th, 1993 | — Arrival in Bangalore<br>Lecture meeting at Institution of Engineers |
| Dec. 5th, 1993 | — Interaction meeting with voluntary organisations connected with environmental activities |
| | — Lecture - Demonstration at Bannerghatta National Park |
| Dec. 6, 1993 to Dec. 9, 1993 | — Lecture - Demonstration at various schools located in the city |
| | — Going round important roads, areas - spreading the message of environment protection |
| | — Public/Technical lecture - demonstration organised by various associations/ organisations |
| 7th Dec. 1993 6 pm - CHOKKASI HALL IISc | |
| Dec. 10, 1993 | — Visit to Sriramanahalli Project area and Sri Devaraj Urs Medical College, Kolar. |
| | — Public Lecture |
| Dec. 11, 1993 | — Scheduled Programmes at Mysore |
| Dec. 12, 1993 | — Scheduled Programmes at Mysore/Kodagu |
| Dec. 13, 1993 | — Scheduled Programmes at Mangalore |
| Dec. 14, 1993 | — Concluding meetings at Bangalore |
| Dec. 15, 1993 | — Departure from Bangalore |

**Note :** Detailed and confirmed programmes issued separately.

## Biographical Sketch

Dr. J.R. Vallentyne (also known as Johnny Biosphere) is a Canadian by birth. He received his education in biology at Queen's University in Kingston, Ontario and Yale University in New Haven; Connecticut. He lectured at Queen's from 1952 to 1958 and Cornell University from 1958 to 1966. From 1966 to 1992, he held the position of Senior Scientist for the federal government's Department of Fisheries and Oceans, Central and Arctic Region.

He is the author of 100 scientific publications, including a book ''The Algal Bowl; Lakes and Man'', which improved public understanding of relationships between people and lakes. Dr. Vallentyne played a prominent role in reducing the levels of phosphate in heavy duty laundry detergents in the early 1970's and in introducing the ecosystem concept into the operations of the International Joint Commission.

Recipient of the 1992 Rachel Carson award for increasing environmental awareness, Dr. Vallentyne continues to present his person-planet image, directly and through the media, to thousands of people around the world!

---

*For further details regarding the programme please contact :*

The Chief Adviser
**TECSOK**
R.P. Bhavan, 6th Floor
Nrupathunga Road
**Bangalore-560 002**
Tel : 2211150, 2212590, 2212516
Tlx : 0845-2148-KIADB-IN
Fax : 0812-2211018

(**Contact Persons** : Sri. G.S. Paranjyothi/ Sri. K.L. Rao/Sri. M. S. Bhat)

## 'ನಿಮ್ಮ ಪರಿಸರ ವ್ಯವಸ್ಥೆ'ಯ ಬಗ್ಗೆ ಜಾಗೃತಿ ಮೂಡಿಸಲು ಬೆಂಗಳೂರು, ಮೈಸೂರು ಮತ್ತು ಮಂಗಳೂರಿಗೆ ಬರಲಿದ್ದಾರೆ !

# ಜಾನಿ ಬಯೋಸ್ಪಿಯರ್



ಶುದ್ಧ, ತಾಜ ಹಾಗೂ ನಿರ್ಮಲವಾದ ಗಾಳಿ ಅಥವಾ ನೀರು ಇಲ್ಲದಿರುತ್ತಿದ್ದರೆ, ನಮ್ಮ ವಾತಾವರಣ ಅತೀ ಉಷ್ಣ ಅಥವಾ ಅತೀ ಶೀತವಾಗಿರುತ್ತಿದ್ದರೆ ನಮಗೆ ಬದುಕಲು ಸಾಧ್ಯವಾಗುತ್ತಿರಲಿಲ್ಲ. ನಮ್ಮ ಪರಿಸರ ನಿಜವಾಗಿಯೂ ನಮ್ಮ ಬದುಕಿಗಾಗಿ; 'ನಿಮ್ಮ ಪರಿಸರ ವ್ಯವಸ್ಥೆ' ಮತ್ತು ನಿಮ್ಮ ವಾತಾವರಣ ಇವೆರಡು ಪರಸ್ಪರ ಪೂರಕ. ಜೀವ-ಗೋಲ ನಮ್ಮ ಮನೆ.... ಅದು ನಮಗೇ ಸೇರಿದ್ದು. ನಾವು ಅದನ್ನು ಸಂರಕ್ಷಿಸದಿದ್ದರೆ ಇನ್ಯಾರು ಮಾಡುತ್ತಾರೆ ಈ ಕಾರ್ಯವನ್ನು....?

**ಕಾರ್ಯಕ್ರಮದ ಪ್ರವರ್ತಕರು :**

- ಪರಿಸರ, ಜೀವಿಸ್ಥಿತಿ ಮತ್ತು ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ.
- ಬೆಂಗಳೂರು ನಗರ ಪರಿಸರ ಯೋಜನೆ
- ಎನ್‌ವಾಯರ್‌ಮೆಂಟ್, ಕೆನಡಾ, ಪಿಷರಿಸ್ ಮತ್ತು ಓಷನ್ಸ್ ಕೆನಡಾ.
- ಲೇಕ್‌ಸೈಡ್ ಎಜುಕೇಶನ್ ಟ್ರಸ್ಟ್, ಬೆಂಗಳೂರು-42.

**ಸಂಯೋಜನೆ :**

- ಪರಿಸರ ವಿಭಾಗ, ಕರ್ನಾಟಕ ತಾಂತ್ರಿಕ ಸಲಹಾ ಸೇವಾ ಸಂಸ್ಥೆ (ಟೆಕ್ಸಾಕ್), ಬೆಂಗಳೂರು-2.

**'ಜಾನಿ ಬಯೋಸ್ಪಿಯರ್'** ಎಂದೇ ಜನಪ್ರಿಯವಾಗಿರುವ ಕೆನಡಾದ ಪರಿಸರ ತಜ್ಞ ಡಾ|| ಜೆ.ಆರ್. ವ್ಯಾಲೆಂಟಿನ್ 1993ರ ದಶಂಬರ 4 ರಿಂದ 15 ರವರೆಗೆ **ಬೆಂಗಳೂರು, ಮೈಸೂರು** ಮತ್ತು **ಮಂಗಳೂರು** ನಗರಗಳಿಗೆ ಭೇಟಿ ನೀಡಲಿದ್ದಾರೆ. ನಮ್ಮ ಪರಿಸರ ವ್ಯವಸ್ಥೆಯ ಬಗ್ಗೆ ಜನ ಜಾಗೃತಿ ಮೂಡಿಸುವ ಪ್ರಮುಖ ಉದ್ದೇಶವಿರಿಸಿಕೊಂಡು ಬರುತ್ತಿರುವ ಡಾ|| ವ್ಯಾಲೆಂಟಿನ್ 1974 ರಿಂದ 1980 ರವರೆಗೆ ಇಂಟರ್ ನ್ಯಾಷನಲ್ ಎಸೋಸಿಯೇಷನ್ ಆಫ್ ಲಿಮ್ನೋಲಜಿಯದ ಅಧ್ಯಕ್ಷರಾಗಿದ್ದು, ಈಗ ಬರ್ಲಿಂಗ್ ಟನ್ ನಲ್ಲಿರುವ ಅಂತರ್ಜಲದ ಬಗ್ಗೆ ಸಂಶೋಧನೆ ಮಾಡುವ ಸಂಸ್ಥೆಯೊಂದರಲ್ಲಿ ವಿಜ್ಞಾನಿಯಾಗಿದ್ದಾರೆ. "ಜಾನಿ ಬಯೋಸ್ಪಿಯರ್" ಎಂದು ಪ್ರಖ್ಯಾತವಾಗಿರುವ ಇವರು 1980 ರಿಂದ ಭೂಗೋಲವೊಂದನ್ನು ತನ್ನ ಬೆನ್ನಲ್ಲೇ ಒಯ್ಯುತ್ತಿದ್ದು, ನಾವು ಈ ಭೂಮಿಯಲ್ಲಿ ಜೀವಿಸುತ್ತಿದ್ದೇವೆ ಎಂದು ಸದಾ ನೆನಪಿಸಿ ಕೊಡುತ್ತಿದ್ದಾರೆ.

ಡಾ|| ವ್ಯಾಲೆಂಟಿನ್ ತಮ್ಮ ಭೇಟಿಯ ಸಂದರ್ಭದಲ್ಲಿ ಸಾರ್ವಜನಿಕ ಭಾಷಣ, ಸಭೆಗಳ ಮೂಲಕ ಪರಿಸರ ವ್ಯವಸ್ಥೆಯ ಸಂರಕ್ಷಣೆಯ ಬಗ್ಗೆ ಜನ ಸಾಮಾನ್ಯರಲ್ಲಿ ತಿಳುವಳಿಕೆ ಮೂಡಿಸಲು ಯತ್ನಿಸುತ್ತಾರಲ್ಲದೆ, ಪರಿಸರ ಸ್ಥಿತಿಯ ಬಗ್ಗೆ ವಿವಿಧ ಸಂಘ, ಸಂಸ್ಥೆಗಳ ಆಶ್ರಯದಲ್ಲಿ ತಾಂತ್ರಿಕ ಭಾಷಣಗಳನ್ನು ಮಾಡಲಿದ್ದಾರೆ. ಶಾಲಾ ಮಕ್ಕಳಲ್ಲಿ ಪರಿಸರ ಪ್ರಜ್ಞೆಯನ್ನು ಮೂಡಿಸುವುದಕ್ಕಾಗಿ ವಿವಿಧ ಶಾಲೆಗಳಲ್ಲಿ (ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳು) ಒಂದು ತಾಸು ಅವಧಿಯ **"ನಿಮ್ಮ ಪರಿಸರ ತಿಳಿಯಿರಿ"** (Know Your Ecosystem) ಎಂಬ ವಿಚಾರದ ಬಗ್ಗೆ ಭಾಷಣ-ಪ್ರಾತ್ಯಕ್ಷಿಕೆಯನ್ನು ನೀಡುವುದು ಡಾ|| ವ್ಯಾಲೆಂಟಿನ್ ರವರ ವಿಶೇಷತೆಯಾಗಿದ್ದು, ಈ ಸಂದರ್ಭದಲ್ಲಿ ಮಕ್ಕಳ ಪ್ರಶ್ನೆಗಳಿಗೂ ಅವರು ಉತ್ತರಿಸಲಿದ್ದಾರೆ.

ಡಾ|| ವ್ಯಾಲೆಂಟಿನ್, ಇಕೋಸಿಸ್ಟಮ್ ಮೂಲಕ ಪರಿಸರ ನಿರ್ವಹಣೆಯ ಪ್ರತಿಪಾದಕರಾಗಿದ್ದು ಈ ತತ್ವವನ್ನು ಜಗತ್ತಿನ ಹೆಚ್ಚಿನ ಭಾಗಗಳಲ್ಲಿ ಈಗ ಸ್ವೀಕರಿಸಲಾಗಿದೆ.

ಜನರ ಅಭ್ಯಾಸ ಬಲವನ್ನೇ ಬದಲಾಯಿಸುವಷ್ಟು ಮಟ್ಟಿಗೆ, ಪರಿಸರದ ಬಗ್ಗೆ ವ್ಯಾಪಕವಾದ ಜಾಗೃತಿಯನ್ನು ಪ್ರಸರಿಸಿರುವುದಕ್ಕಾಗಿ 1992ರ ರಾಕಲ್ ಕಾರ್ಸನ್ ಪ್ರಶಸ್ತಿಯನ್ನು ಪಡೆದಿರುವ ಡಾ|| ಜೆ.ಆರ್. ವ್ಯಾಲೆಂಟಿನ್, ಒಂದು ವೇಳೆ ತಮ್ಮಿಂದಾಗಿ ಸ್ಥಳೀಯ ಪರಿಸರ ಪ್ರಜ್ಞಾ - ಚಟುವಟಿಕೆಗಳು ವೃದ್ಧಿ ಆಗುವುದಿದ್ದರೆ ಈ ನಿಟ್ಟಿನಲ್ಲಿ ತನ್ನ ಸರ್ವ ಸಹಕಾರ ನೀಡಲು ಸದಾ ಸಿದ್ಧ !

ಈ ಕಾರ್ಯಕ್ರಮಗಳ ಅವಧಿಯಲ್ಲಿ ಕೆನಡಾದಲ್ಲಿ ಖ್ಯಾತ ಪರಿಸರ ವಿಜ್ಞಾನಿಯಾಗಿರುವ **ಡಾ|| ಸಿ. ರಾಜಶೇಖರ್ ಮೂರ್ತಿ**ಯವರು (ಮೂಲತಃ ಬೆಂಗಳೂರಿನವರು), 'ಜಾನಿ ಬಯೋಸ್ಪಿಯರ್'ರವರ ಜೊತೆಗಿದ್ದು, ಪರಿಸರ ಪ್ರಜ್ಞೆ ಪ್ರಸರಣ ಕಾರ್ಯಕ್ರಮದಲ್ಲಿ ಸಹಭಾಗಿಯಾಗಲಿದ್ದಾರೆ.

## ಕಾರ್ಯಕ್ರಮಗಳ ಸ್ಥೂಲ ನೋಟ

| | | |
|---|---|---|
| ದಶಂಬರ 4, 1993 | – | ಬೆಂಗಳೂರು ತಲುಪುವುದು. |
| | – | ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್‌ನಲ್ಲಿ ಭಾಷಣ. |
| ದಶಂಬರ 5, 1993 | – | ಪರಿಸರ ಚಟುವಟಿಕೆಗಳಲ್ಲಿ ನಿರತವಾಗಿರುವ ಸ್ವಯಂ-ಸೇವಾ ಸಂಸ್ಥೆಗಳೊಂದಿಗೆ ಸಂವಾದ. |
| | – | ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಸಾರ್ವಜನಿಕ ಪ್ರಾತ್ಯಕ್ಷಿಕೆ. |
| ದಶಂಬರ 6, 1993 ರಿಂದ ದಶಂಬರ 9, 1993 | – | ನಗರದ ವಿವಿಧ ಶಾಲೆಗಳಿಗೆ ಭೇಟಿ, ಭಾಷಣ-ಪ್ರಾತ್ಯಕ್ಷಿಕೆ. |
| | – | ನಗರದ ಪ್ರಮುಖ ಬೀದಿ, ಪ್ರದೇಶಗಳಲ್ಲಿ ಸಂಚಾರ - ಪರಿಸರ ಪ್ರಜ್ಞೆ ಪ್ರಸರಣ |
| | – | ಸಾರ್ವಜನಿಕ ಭಾಷಣ - ಕಾರ್ಯಕ್ರಮಗಳು. |
| ದಶಂಬರ 10, 1993 | – | ಶ್ರೀರಾಮನಹಳ್ಳಿ ಯೋಜನಾ ಪ್ರದೇಶ ಹಾಗೂ ಕೋಲಾರ ದೇವರಾಜ ಅರಸ್ ವೈದ್ಯಕೀಯ ಕಾಲೇಜುಗಳಿಗೆ ಭೇಟಿ. |
| | – | ಸಾರ್ವಜನಿಕ ಭಾಷಣ. |
| ದಶಂಬರ 11, 1993 | – | ಮೈಸೂರಿನಲ್ಲಿ ಕಾರ್ಯಕ್ರಮಗಳು. |
| ದಶಂಬರ 12, 1993 | – | ಮೈಸೂರು, ಕೊಡಗಿನಲ್ಲಿ ಕಾರ್ಯಕ್ರಮಗಳು. |
| ದಶಂಬರ 13, 1993 | – | ಮಂಗಳೂರಿನಲ್ಲಿ ಕಾರ್ಯಕ್ರಮಗಳು. |
| ದಶಂಬರ 14, 1993 | – | ಬೆಂಗಳೂರಿನಲ್ಲಿ ಸಮಾರೋಪ ಕಾರ್ಯಕ್ರಮ. |
| ದಶಂಬರ 15, 1993 | – | ಬೆಂಗಳೂರಿನಿಂದ ನಿರ್ಗಮನ |

ವಿ.ಸೂ. : ವಿವರವಾದ ಹಾಗೂ ನಿಖರವಾದ ಕಾರ್ಯಕ್ರಮ ಸೂಚಿಗಳನ್ನು ಪ್ರತ್ಯೇಕವಾಗಿ ನೀಡಲಾಗುವುದು.

## ಜಾನಿ ಬಯೋಸ್ಫಿಯರ್ – ಪರಿಚಯ

'ಜಾನಿ ಬಯೋಸ್ಫಿಯರ್' ಎಂದು ಜನಪ್ರಿಯವಾಗಿರುವ ಡಾ|| ಜೆ.ಆರ್. ವ್ಯಾಲೆಂಟಿನ್ ಕೆನಡಾದಲ್ಲಿ ಜನಿಸಿದರು. ಜೀವಿ ಪರಿಸ್ಥಿತಿ ಶಾಸ್ತ್ರ ಹಾಗೂ ಭೂರಸಾಯನಶಾಸ್ತ್ರದಲ್ಲಿ ಕ್ವೀನ್ಸ್ ಮತ್ತು ಏಲ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆದ ಇವರು 1952 ರಿಂದ 1958 ರವರೆಗೆ ಕ್ವೀನ್ಸ್ ಹಾಗೂ 1958 ರಿಂದ 1966 ರವರೆಗೆ ಕಾರ್ನೆಲ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿದ್ದರು. 1966 ರಿಂದ 1992 ರವರೆಗೆ ಫೆಡರಲ್ ಸರ್ಕಾರದ ಮೀನುಗಾರಿಕೆ ಹಾಗೂ ಸಾಗರಗಳ ಇಲಾಖೆಯಲ್ಲಿ, ಸೆಂಟ್ರಲ್ ಹಾಗೂ ಆರ್ಕ್‌ಟಿಕ್ ಪ್ರದೇಶಗಳಲ್ಲಿ ಹಿರಿಯ ವಿಜ್ಞಾನಿಯಾಗಿ ಸೇವೆ ಸಲ್ಲಿಸಿದ್ದಾರೆ.

ಇವರು ನೂರು ವೈಜ್ಞಾನಿಕ ಪ್ರಕಟಣೆಗಳ ಲೇಖಕರಾಗಿದ್ದು ಇದರಲ್ಲಿ ಜನರು ಮತ್ತು ಸರೋವರ ನಡುವಣ ಸಾರ್ವಜನಿಕ ತಿಳುವಳಿಕೆಯನ್ನು ವೃದ್ಧಿಸಿದ "ದಿ ಆಲ್ಗಲ್ ಬೌಲ್; ಲೇಕ್ ಎಂಡ್ ಮ್ಯಾನ್" ಪುಸ್ತಕವೂ ಸೇರಿದೆ. 1970ರ ಆರಂಭದಲ್ಲಿ ಹೆವಿ ಡ್ಯೂಟಿ ಲಾಂಡ್ರಿ ಡಿಟರ್ಜೆಂಟ್‌ನಲ್ಲಿ ಫೋಸ್ಫೇಟ್ ಮಟ್ಟವನ್ನು ಕಡಿಮೆಗೊಳಿಸುವಲ್ಲಿ ಹಾಗೂ ಅಂತರಾಷ್ಟ್ರೀಯ ಜಂಟಿ ಆಯೋಗದ ಕಾರ್ಯಾಚರಣೆಯಲ್ಲಿ ಪರಿಸರ ವ್ಯವಸ್ಥೆ (Ecosystem) ವಿಚಾರವನ್ನು ಪರಿಚಯಿಸುವುದರಲ್ಲಿ ಡಾ|| ವ್ಯಾಲೆಂಟಿನ್ ಗಮನಾರ್ಹ ಪಾತ್ರವನ್ನು ನಿರ್ವಹಿಸಿದ್ದಾರೆ.

ಪರಿಸರ ಪ್ರಜ್ಞೆಯನ್ನು ವೃದ್ಧಿಸುವುದಕ್ಕಾಗಿ ನೀಡುವ 1992ರ 'ರಾಕಲ್ ಕಾರ್ಸನ್ ಪ್ರಶಸ್ತಿ' ವಿಜೇತರಾಗಿರುವ ಡಾ. ವ್ಯಾಲೆಂಟಿನ್ ಮಾನವ-ಗ್ರಹ ತತ್ವ-ಸಂದೇಶವನ್ನು ನೇರವಾಗಿ ಹಾಗೂ ವಿವಿಧ ಮಾಧ್ಯಮದ ಮೂಲಕ ಸಾವಿರಾರು ಜನರಿಗೆ ಜಗತ್ತಿನಾದ್ಯಂತ ಬಿತ್ತರಿಸುತ್ತಿದ್ದಾರೆ.

---

**ಈ ಕಾರ್ಯಕ್ರಮಗಳ ಬಗ್ಗೆ ಹೆಚ್ಚಿನ ವಿವರಗಳಿಗೆ ದಯವಿಟ್ಟು ಸಂಪರ್ಕಿಸಿ :**

ಮುಖ್ಯ ಸಲಹೆಗಾರರು
**ಕರ್ನಾಟಕ ತಾಂತ್ರಿಕ ಸಲಹಾ ಸೇವಾ ಸಂಸ್ಥೆ (ಟೆಕ್ಸಾಕ್)**
6ನೇ ಮಹಡಿ, ರಾಷ್ಟ್ರೋತ್ಥಾನ ಪರಿಷತ್ ಭವನ
ನೃಪತುಂಗ ರಸ್ತೆ, **ಬೆಂಗಳೂರು-560 002**
ದೂರವಾಣಿ : 2211150, 2212590, 2212516
ಟೆಲೆಕ್ಸ್ : 845-2148 - ಕೆ.ಐ.ಎ.ಡಿ.ಬಿ.-ಇನ್
ಫ್ಯಾಕ್ಸ್ : 0812-2211018

(ಸಂಪರ್ಕಿಸಬೇಕಾದ ವ್ಯಕ್ತಿಗಳು : ಶ್ರೀ ಜಿ.ಎಸ್. ಪರಂಜ್ಯೋತಿ/ ಶ್ರೀ ಕೆ.ಎಲ್. ರಾವ್/ ಶ್ರೀ ಎಂ.ಎಸ್. ಭಟ್)